ಬಂದೀಖಾನೆಯಲ್ಲಿ ಮೂಲ ಸೌಲಭ್ಯದ ಕೊರತೆಯಿಂದ ಕೈದಿಗಳ ಸಾವು

206(552) ಶ್ರೀ ನರೇಂದ್ರಬಾಬು ನೆ ಲ:(ಮಹಾಲಕ್ಷ್ಮಿ ಲೇಔಟ್) ಮಾನ್ಯ ತೋಟಗಾರಿಕೆ ಹಾಗೂ ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂದೀಖಾನೆಯಲ್ಲಿರುವ ಕೆಲವು ಖೈದಿಗಳು ರೋಗಗ್ರಸ್ಥರಾಗಿದ್ದು ಸರಿಯಾದ ಚಿಕಿತ್ಸಾ ಸೌಲಭ್ಯಗಳಿಲ್ಲದೆ ನಿಧನರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಬಂದೀಖಾನೆಯಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ?

ಇ) ಬಂದೀಖಾನೆ ಮತ್ತು ಕೈದಿಗಳ ಪುರೋಭಿವೃದ್ದಿಗಾಗಿ ಸರ್ಕಾರ ಯಾವ್ಯಾವ ಕ್ರಮಗಳನ್ನು ತೆಗೆದುಕೊಂಡಿದೆ?

ಶ್ರೀ ಉಮೇಶ್ ಏ ಕತ್ತಿ(ತೋಟಗಾರಿಕೆ ಹಾಗೂ ಬಂದೀಖಾನೆ ಸಚಿವರು):

ಅ) ಹೌದು

ಆ) ರಾಜ್ಯದ ಎಲ್ಲಾ ಕೇಂದ್ರ ಕಾರಾಗೃಹಗಳಲ್ಲಿ ಹಾಗೂ ಕೆಲವೊಂದು ಜಿಲ್ಲಾ ಕಾರಾಗೃಹಗಳಲ್ಲಿ ಬಂದಿಗಳ ವೈದ್ಯಕೀಯ ತಪಾಸಣೆಗಾಗಿ ಪ್ರತ್ಯೇಕ ಆಸ್ಪತ್ರೆ ವಿಭಾಗಗಳಿವೆ. ಇಲ್ಲಿ ಆರೋಗ್ಯ ಇಲಾಖೆಯಿಂದ ಪ್ರತಿನಿಯೋಜನೆ ಮೇರೆಗೆ ಕೆಲಸಮಾಡುವ ವೈದ್ಯಾಧಿಕಾರಿಗಳಿರುತ್ತಾರೆ. ಅವರಿಗೆ ಸಹಾಯಕರಾಗಿ ಫಾರ್ಮಸಿಸ್ಟ್ ಮತ್ತು ನರ್ಸಿಂಗ್ ಆರ್ಡಲಿಗಳು ಇರುತ್ತಾರೆ. ಈ ಆಸ್ಪತ್ರೆಗಳಲ್ಲಿ ಅವಶ್ಯಕವಿರುವ ವೈದ್ಯಕೀಯ ಉಪಕರಣಗಳಾದ ಇಸಿಜಿ. ಎಕ್ಸ್‌ರೇ ಯಂತ್ರ. ಪ್ರಯೋಗಾಲಯದ ಉಪಕರಣಗಳು ಲಭ್ಯವಿದೆ. ಅಗತ್ಯವಾಗಿ ಬೇಕಾದ ಔಷಧಿಗಳನ್ನು ಸಹ ಒದಗಿಸಲಾಗಿರುತ್ತದೆ. ಹೆಚ್ಚಿನ ಚಿಕಿತ್ಸೆ/ತುರ್ತು ಸಂದರ್ಭಗಳಲ್ಲಿ ಬಂದಿಗಳನ್ನು ಹೊರ ಆಸ್ಪತ್ರೆಗಳಿಗೆ ಕಳುಹಿಸಲಾಗುತ್ತದೆ. ವೈದ್ಯಾಧಿಕಾರಿಗಳ ಸಂಖ್ಯೆಯು ಕೊರತೆಯಿರುತ್ತದೆ. ಕಾರಾಗೃಹಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಲವು ಕಾರ್ಯಕ್ರಮಗಳನ್ನು ಕೈಗೊಂಡಿದೆ.

ಅವುಗಳು ಮುಖ್ಯವಾದವು ಈ ಕೆಳಕಂಡಂತಿವೆ:–

1) ಬಂದಿಗಳ ದಟ್ಟಣೆ ತಗ್ಗಿಸಲು ಹೆಚ್ಚುವರಿ ಬ್ಯಾರಾಕ್/ಸೆಲ್‌ಗಳ ನಿರ್ಮಾಣ.

2) ನೀರು ಮತ್ತು ನೈರ್ಮಲೀಕರಣ ವ್ಯವಸ್ಥೆಯಲ್ಲಿ ಸುಧಾರಣೆ

3) ಹಾಲಿ ಇರುವ ಕಾರಾಗೃಹಗಳನ್ನು ನವೀಕರಿಸುವುದು ಮತ್ತು ದುರಸ್ತಿಗೊಳಿಸುವುದು.

4) ಉನ್ನತೀಕರಿಸಿದ ಅಡುಗೆಮನೆ ವೈದ್ಯಾಧಿಕಾರಿಗಳು ಮತ್ತು ವೈದ್ಯಕೀಯ ಸಿಬ್ಬಂದಿಗಳ ಸೇವೆ ಹೆಚ್ಚಿಸುವಿಕೆ ಮತ್ತು ವೈದ್ಯಕೀಯ ಉಪಕರಣಗಳ ಪೂರೈಕೆ ಸರ್ಕಾರೇತರ ಸಂಘ ಸಂಸ್ಥೆಗಳು/ವೈದ್ಯಕೀಯ ಕಾಲೇಜುಗಳ ಸಹಯೋಗದೊಂದಿಗೆ ವೈದ್ಯಕೀಯ ತಪಾಸಣೆ ಶಿಬಿರಗಳನ್ನು ಆಯೋಜಿಸುವುದು.

ಇ) ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ:–

- ನಗರಗಳ ಹೃದಯ ಭಾಗದಲ್ಲಿರುವ ಹಳೆಯ ಬಂದೀಖಾನೆಗಳನ್ನು ಹೊಸ ಕಟ್ಟಡಗಳಿಗೆ ಸ್ಥಳಾಂತರಿಸುವುದು. ಈಗಾಗಲೇ 9 ಬಂದೀಖಾನೆಗಳನ್ನು ಹೊಸ ಕಟ್ಟಡಗಳಿಗೆ ಸ್ಥಳಾಂತರಿಸಲಾಗಿದೆ.
- ಹೆಚ್ಚುವರಿಯಾಗಿ ಅನೆಕ್ಸ್ ಮತ್ತು ಬ್ಯಾರಕ್‌ಗಳ ನಿರ್ಮಾಣ.
- ನೀರು ಸರಬರಾಜು ಮತ್ತು ನೈರ್ಮಲ್ಯ ಉತ್ತಮಪಡಿಸುವಿಕೆ.
- ಬಂದಿಗಳ ಪುರೋಭಿವೃದ್ಧಿಗಾಗಿ ಅವರು ಬಂಧನದಲ್ಲಿರುವ ಅವಧಿಯಲ್ಲಿ ವಿವಿಧ ವೃತ್ತಿಪರ ಶಿಕ್ಷಣದಲ್ಲಿ ತರಬೇತಿ ನೀಡಿಕೆ.
- ಕೆಲಸ ಮಾಡುವ ಬಂದಿಗಳಿಗೆ ನೀಡಲಾಗುತ್ತಿರುವ ಮಜೂರಿ ದರದಲ್ಲಿ ಹೆಚ್ಚಳಿಕೆ.
- ಮನಪರಿವರ್ತನೆಗಾಗಿ ವಿವಿಧ ಧಾರ್ಮಿಕ ಗುರುಗಳಿಂದ ಪ್ರವಚನ, ನೀತಿ ಬೋಧನೆ ಮತ್ತು ಪರಿವರ್ತನಾ ಶಿಬಿರಗಳು ಹಮ್ಮಿಕೊಳ್ಳಲಾಗುತ್ತಿದೆ.
- ಹೆಚ್ಚಿನ ವ್ಯಾಸಾಂಗಕ್ಕಾಗಿ ಉತ್ತೇಜನ ಮತ್ತು ಸರ್ಕಾರದ ಖರ್ಚಿನಲ್ಲಿ ವಿದ್ಯಾಭ್ಯಾಸ ಮಾಡಲು ಅವಕಾಶ.

ಬೆಂಗಳೂರು ನಗರದ ಸರ್ಕಾರಿ ಬಹುಮಹಡಿ ಕಟ್ಟಡಗಳಲ್ಲಿರುವ ಲಿಫ್ಟ್‌ಗಳು

207(554) ಶ್ರೀ ನರೇಂದ್ರ ಬಾಬು ನೆ ಲ:(ಮಹಾಲಕ್ಷ್ಮಿ ಲೇಔಟ್) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?